# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ಸಂಖ್ಯೆ:ತುವಿತು:ಸಾಮಾನ್ಯ ವಿಭಾಗ:2024–25/ 2589 ದಿನಾಂಕ:07.12.2024

## ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)

ವಿಷಯ: ವಿಶ್ವವಿದ್ಯಾನಿಲಯದ ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್‌ಗೆ **Local Area Network (LAN) (Networking)** ಸೇವೆ ಪಡೆಯಲು ದರಪಟ್ಟಿಯನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಸಂಯೋಜಕರು, ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ ವಿಭಾಗ ಇವರ ಮನವಿ ಪತ್ರದ ದಿನಾಂಕ:18.10.2024

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 26.11.2024.(ಕಂಡಿಕೆ–30)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್‌ನ ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ ವಿಭಾಗದ 05 ಪ್ರಯೋಗಾಲಯಗಳಿಗೆ **(MCA) Local Area Network (LAN) (Networking)** ಕಾರ್ಯನಿರ್ವಹಿಸಲು ಉಲ್ಲೇಖ(1)ರ ಬೇಡಿಕೆಯನುಸಾರ ಉಲ್ಲೇಖ(2)ರ ಆದೇಶದ ಮೇರೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ತಿದ್ದುಪಡಿ 4(i)(ii) ರ ನಿಯಮದನ್ವಯ ಪಡೆಯಲು ಕೆಳಕಂಡ ವಿವರ ಹಾಗೂ ಷರತ್ತುಗಳಿಗೊಳಪಟ್ಟು ನೋಂದಾಯಿತ ಆಸಕ್ತ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| Sl. No. | Items (For each lab) | Quantity | Rate to be quoted per unit (Incl. of all taxes) |
|---|---|---|---|
| 01 | 02 | 03 | 04 |
| 1 | D-Link 24 Port Gigabit LAN Switch | 02 Nos | |
| 2 | D-Link 24 Port Patch Panel | 02 Nos | |
| 3 | D-Link 24 Port Cable Manager | 02 Nos | |
| 4 | D-Link 24 CAT 6 Indoor cable | 03 Box | |
| 5 | Casing Caping 3 inch | 80 mts | |
| 6 | Casing Caping 2 inch | 80 mts | |
| 7 | 6U Network Rack with Fan and Accessories | 01 Nos | |
| 8 | Patch Cord 1 mtr | 45 Nos | |
| 9 | Patch Cord 2 mtr | 45 Nos | |
| 10 | D-Link Face Plate | 40 Nos | |
| 11 | D-Link I/O Key Stone | 40 Nos | |
| 12 | D-Link Back Box | 40 Nos | |
| 13 | RJ 45 Jack | 10 Nos | |
| 14 | Power Strip | 01 Nos | |
| | Installation Charges for 5 Labs | | |

ಷರತ್ತುಗಳು:

1. ವಿಶ್ವವಿದ್ಯಾನಿಲಯದ ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್‌ನ ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ (MCA) Local Area Network (LAN) (Networking) ಅನ್ನು ಅಳವಡಿಸತಕ್ಕದ್ದು.
2. ಮುಚ್ಚಿದ ಲಕೋಟೆಯ ಮೇಲೆ ವಿಶ್ವವಿದ್ಯಾನಿಲಯದ ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್‌ನ ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ **LAN Work (Networking) ದರಪಟ್ಟಿ"** ಎಂದು ನಮೂದಿಸುವುದು.
3. **ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು–572 103,** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
4. **ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಯವರು ತುಮಕೂರು ಮಹಾನಗರ ಪಾಲಿಕೆಯಲ್ಲಿ ನೋಂದಣಿಯಾಗಿರತಕ್ಕದ್ದು.**
5. **Local Area Network (LAN) (Networking) ನ್ನು ಮಾಡಿರುವ ಅನುಭವ ಪ್ರಮಾಣ ಪತ್ರವನ್ನು ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.**
6. **ಸದರಿ ಪರಿಕರಗಳ ವಾರಂಟಿಯನ್ನು ದರಪಟ್ಟಿಯೊಂದಿಗೆ ನೀಡುವುದು.**
7. **ಎಲ್ಲಾ ಪರಿಕರಗಳು ಉತ್ತಮ ಗುಣಮಟ್ಟದಿಂದ ಕೂಡಿರುವ ಸಾಮಗ್ರಿಗಳ ದರವನ್ನು ನೀಡತಕ್ಕದ್ದು.**
8. **ದರಪಟ್ಟಿಯನ್ನು ಸಲ್ಲಿಸುವ ಮುನ್ನ Networking ಮಾಡುವ ಸ್ಥಳವನ್ನು ಪರಿಶೀಲಿಸಿ ದರಪಟ್ಟಿಯನ್ನು ಸಲ್ಲಿಸತಕ್ಕದ್ದು.**
9. ದರಪಟ್ಟಿಯೊಂದಿಗೆ ಯಾವುದಾದರೂ ಎರಡು ಇಲಾಖೆ/ಸಂಸ್ಥೆಗಳಿಗೆ **Area Networking** ನ ಕಾರ್ಯನಿರ್ವಹಣೆ ಮಾಡಲು ನೀಡಿರುವ ಕಾರ್ಯಾದೇಶವನ್ನು ಸಲ್ಲಿಸತಕ್ಕದ್ದು.
10. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 18.12.2024. ಅಪರಾಹ್ನ 12.30ಗಂಟೆ.**
11. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
12. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸಾಗಾಣಿಕಾ ವೆಚ್ಚವನ್ನು ಒಳಗೊಂಡಿರತಕ್ಕದ್ದು.
13. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
14. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
15. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
16. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
17. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಸಂಯೋಜಕರು,** ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ ವಿಭಾಗ ಜ್ಞಾನಸಿರಿ ಕ್ಯಾಂಪಸ್, ತುಮಕೂರು ಇವರನ್ನು ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

ಉಪಕುಲಸಚಿವರು

ಉಪಕುಲಸಚಿವರು
ಸಾಮಾನ್ಯ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

ಪ್ರತಿಗಳು:

1. ಸಂಯೋಜಕರು, ಸ್ನಾತಕೋತ್ತರ ಗಣಕಯಂತ್ರ ಅನ್ವಯಗಳು ಮತ್ತು ಸಂಶೋಧನಾ ವಿಭಾಗ, ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್, ತುಮಕೂರು.
2. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು).
4. ಕಚೇರಿ ಪ್ರತಿ.